ಬರ್ತಿನವ್ವ' ಎಂದು ಲಗಸೆವ್ವನ ಗೆಳತಿ ಕೇರಿ ಕಾಳವ್ವ ಕೈ ಬೀಸುತ್ತ ನಡೆದಳು. ಲಗಸೆವ್ವಂದು ಇನ್ನು ಅಂಗಳ ಕಸಾ ಗುಡುಸೋದು ಮುಗಿದಿರಲಿಲ್ಲ. ಅಂಬವ್ವ ಬುತ್ತಿ ಕಟ್ಟಿಕೊಂಡು ಹೊರಬಂದಳು.

ಅಂಬವ್ವ ಬರೂದನ್ನ ನೋಡಿದ ರೇವಣವ್ವ, 'ಏನ ಸೊಸಿಮುದ್ದ ಬುತ್ತಿ ಕಟಗೊಂಡು ಜಲ್ದೀನ ಅಡವಿಗಿ ಹೊಂಟೆಲ್ಲ' ಎಂದು ರೇವಣವ್ವ ಕೇಳಿದಳು.

'ಹೌದತ್ತಿ, ಊರಿಂದ ಮಗಾ ಬರಾಂವ ಅದಾನ, ದೌಡ ಅವರಿಗಿ ನ್ಯಾರಿ ಕೊಟ್ಟು ಬರಬೇಕು' ಎಂದಳು.

'ನಮ್ಮ ಭಾಗ್ಯ ನೋಡು ನಿನ್ನಂತಹ ಸೊಸೆ ನಮ್ಮ ಮನೀಗಿ ಬರಲಿಲ್ಲ' ಎಂದು 'ಹಳಿ-ಹಚಿ' ಅನ್ನುತ್ತ ಅಂಗಳ ಕೆದರುತ್ತಿದ್ದ ನಾಯಿಗೆ ಬೆದರಿಸಿದಳು. 'ಹಾಳಾದ್ದು ಎಲ್ಲಿಂದ ಬಂತೊ' ಎಂದು ರೇವಣವ್ವ ಯಾಸಿ ದೀಡಿ ಮಾತಾಡಿದಳು.

ಅತ್ತಿ ಬೈಯುವುದು ಕೇಳಿಸಿಕೊಂಡ ಲಗಸೆವ್ವ, 'ಹಾಳಾದ ಎಮ್ಮಿ ಮೇವ ಹಾಕಿದ್ರೂ ಕುಂತಗೊಂಡ ತಿಂತಾದ, ಎದ್ದು ತಿಲ್ಲಾಕ ಯಾವ ಬ್ಯಾನಿ ಬಂದದ ನಿನಗ, ಏಳು ಏಳು ಎದ್ದು ತಿನ್ನು, ಮುಂಜಾಳೆದ್ದು ಹಳ್ಳಾಗಿಳ್ಳಾ ಸರ್‍ಯಾಡಿ ಬರಬರದಾ' ಎಂದು ಎಮ್ಮಿಗಿ ಬೈದಂಗ ಮಾಡಿ ಅತ್ತಿ ರೇವಣವ್ವನನ್ನು ಮೂದಲಿಸಿದಳು.

ಇದು ಕೇರಿಯ ಮನೆ-ಮನೆ ಕಥೆಯಾಗಿತ್ತು. ಕೇರಿಯ ಎಲ್ಲರ ಸಂಸಾರಂದ್ರ

